## 12

# “ಮೇಲ್ಕಿ-ಜೆ-ದೇಕನು” - ಯಾರು?

## (7:1-8:2)

ಲೇವಿಯ ವಂಶಸ್ಥರ ಯಾಜಕ ಸೇವೆಗಿಂತಲೂ, ಯೇಸುವಿನ ಯಾಜಕತ್ವವು ಮಹತ್ವ ವಾದದ್ದು ಎಂಬ ಚರ್ಚೆಯನ್ನು ನಾವು ಮುಂದುವರೆಸುತ್ತಿದ್ದೇವೆ. ಯೇಸುವಿನ “ಯಾಜಕತ್ವವು ಮೆಲ್ಕಿಜೆದೇಕನ ತರಹದ ನಿತ್ಯವಾದ ಯಾಜಕತ್ವವೆಂದು ಬರಹಗಾರನು ತಿಳಿಸಿರುವನು.” 5ನೇ ಅಧ್ಯಾಯದಲ್ಲಿ ಎರಡು ಸಾರಿ ಇದರ ಕುರಿತ ವ್ಯಾಖ್ಯಾನವಿದೆ (ವಚನಗಳು 6, 10). ಆ ಅಂಶವನ್ನು ವಿವರಿಸುವಾಗ, ಅವನ ಓದುಗರು “ಹಾಲುಕುಡಿಯುವವರೇ ಹೊರತು ಗಟ್ಟಿಯಾದ ಆಹಾರವನ್ನು ತಿನ್ನ ತಕ್ಕವರಲ್ಲ” ಎಂದು ಹೇಳಿದ್ದನು (ನೋಡಿರಿ 5:12-14) ಅಂದರೆ ಅವನು ತಿಳಿಸಲಿರುವ ಮುಂದಿನ ವಿಚಾರವನ್ನು ಅವರುಗಳು ಪರಿಗ್ರಹಿಸಲು ಅಶಕ್ತರಾಗಿದ್ದರು ಎಂಬ ಸೂಚನೆಯಾಗಿದೆ. ಆತ್ಮೀಕ ವಿಷಯದಲ್ಲಿ ವೃದ್ಧಿಗೊಳ್ಳದೆ ಹೋದರೆ ಅದರಿಂದಾಗುವ ಅಪಾಯದ ಕುರಿತು ತಿಳಿಸಿರುವನು. ಅವರನ್ನು ಎಚ್ಚರಿಸುವ ಸಮಯದಲ್ಲಿ, “ಯೇಸು ಸದಾಕಾಲವು ಮೆಲ್ಕಿಜೆದೇಕನ ತರಹದ ಮಹಾಯಾಜಕನಾಗಿರುವನು” ಅಂದನು (6:20). ಅದರ ವಿಸ್ತರಣೆಯನ್ನು ಅಧ್ಯಾಯ 7ರಲ್ಲಿ ಮುಂದುವರೆಸಿರುವನು.

ಮೆಲ್ಕಿಜೆದೇಕನು ಯಾರು ಎಂಬ ಪ್ರಶ್ನೆಗೆ, ಮೆಲ್ಕಿಜೆ-*ಯಾರು?* ಎಂಬದೇ ಜನರ ಪ್ರತಿಕ್ರಿಯೆಯಾಗಿರುತ್ತದೆ. ಈ ಹಳೆ ಒಡಂಬಡಿಕೆಯ ಹೆಸರು “ಗುಪ್ತವಾದ ಮೆಲ್ಕಿಜೆದೇಕನು” ಎಂಬ ಬಿರುದು ಹೊಂದಿರುವ ವ್ಯಕ್ತಿಯಾಗಿರುತ್ತಾನೆ. “ಅವನಿಗೆ ತಂದೆಯೂ ತಾಯಿಯೂ ವಂಶಾವಳಿಯೂ” (7:3). ಇಲ್ಲ ಎಂಬುದು ಪ್ರಶ್ನಾತೀತವಾಗಿದೆ. ಮೆಲ್ಕಿಜೆದೇಕನ ತರಹದ ಯಾಜಕನು ಯೇಸು ಎಂಬುದರಲ್ಲಿ ಬರಹಗಾರನು ಯಾವ ವಿಧವಾದ ಮರ್ಮವನ್ನು ಅಡಗಿಸಿರುವನು? ಈ ಕೆಳಕಂಡಂತೆ ಉತ್ತರವನ್ನು ನೀಡಲಾಗಿದೆ.

### ಮೂರು ವಾಕ್ಯಭಾಗಗಳು

ಇಬ್ರಿಯರ ಪತ್ರಿಕೆಯನ್ನು ಹೊರತುಪಡಿಸಿ, ಸತ್ಯವೇದದಲ್ಲಿ ಇನ್ನೆರಡು ಭಾಗದಲ್ಲಿ ಮೆಲ್ಕಿಜೆದೇಕನ ಕುರಿತು ದಾಖಲಿಸಲಾಗಿದೆ: ಆದಿಕಾಂಡ 14:18-20 ರಲ್ಲಿ ಅಬ್ರಹಾಮನು ಅವನನ್ನು ಕ್ಲುಪ್ತವಾಗಿ ಸಂದಿಸಿದ್ದನು. ಕೀರ್ತನೆ 110:1-4ನ್ನು ಇಬ್ರಿಯ 7:1-28ರಲ್ಲಿ ಉಲ್ಲೇಖಿಸಲಾಗಿದೆ.

#### ಯಾಜಕತ್ವದ ಒಂದು ಚಿತ್ರಣ (ಆದಿಕಾಂಡ 14:18-20)[1]

ಆದಿಕಾಂಡದ ಮೂರು ವಚನಗಳಲ್ಲಿ ಮೆಲ್ಕಿಜೆದೇಕನ ಕುರಿತು ತಿಳಿಸಲಾಗಿದೆ. ಆತನನ್ನು “ಶಾಲೋಮಿನ ಅರಸನು” ಎಂದು ಹಾಗೂ ನಿರಂತರವಾದ ದೇವರ ಯಾಜಕನು ಎನ್ನಲಾಗಿದೆ. ಅಬ್ರಹಾಮನು ಅರಸರನ್ನು ಜಯಿಸಿ ಹಿಂದಿರುಗುವಾಗ ಮೇಲ್ಕಿಜೆದೇಕನು ಅವನನ್ನು ಆಶೀರ್ವದಿಸಿದನು. ನಂತರ ಅಬ್ರಹಾಮನು ಹತ್ತರಲ್ಲಿ ಒಂದನ್ನು ಆತನಿಗೆ ನೀಡಿದನು.

ಮೆಲ್ಕಿಜೆದೇಕೆನು ಲೇವಿಯ ವಂಶದವನಾಗಿರಲಿಲ್ಲ (ಅನೇಕ ವರ್ಷಗಳ ನಂತರ ಲೇವಿಯು ಜನಿಸಿದ್ದನು) ಮೆಲ್ಕಿಜೆದೇಕೆನು ಯಾವ ಕ್ರಮದಲ್ಲಿ ಯಾಜಕನಾದನು ಎಂಬ ಮಾಹಿತಿ ಇರುವದಿಲ್ಲ. ಹೇಗೂ ಆತನು ಮಾನವ ವಂಶದವನಲ್ಲ ಎಂಬ ಖಚಿತ ಮಾಹಿತಿ ಇದೆ.

**ಪ್ರವಾದನ ರೂಪವಾದ ಯಾಜಕತ್ವ (ಕೀರ್ತನೆ 110:1-4)**

ಕೀರ್ತನೆ 110 ಮೆಸ್ಸೀಯನ ಕುರಿತದ್ದಾಗಿದೆ.[2] ಇದರಲ್ಲಿನ ವಾಕ್ಯಗಳನ್ನು ಹೊಸ ಒಡಂಬಡಿಕೆಯ ಅನೇಕ ಭಾಗಗಳಲ್ಲಿ ಉಲ್ಲೇಖಿಸಲಾಗಿದೆ. ಕೀರ್ತನೆ 110:1ನ್ನು ಇಬ್ರಿಯ 1:13ರಲ್ಲಿ, ಉಲ್ಲೇಖಿಸಲಾಗಿದೆ. ಕೀರ್ತನೆಯಲ್ಲಿ (ವಚನಗಳು 1-3) ಮೆಸ್ಸಿಯನೆಂದು ಮತ್ತು (ವಚನ 4) ಯಾಜಕನೆಂದು ಬರೆಯಲಾಗಿದೆ. ಹಾಗೂ "ಮೆಲ್ಕಿಜೆದೇಕನ ತರಹದ" ಎಂದು ಸಹ ಉಲ್ಲೇಖಿಸಲಾಗಿದೆ (ವಚನ 6:20).

**ಪರಿಪೂರ್ಣವಾದ ಯಾಜಕತ್ವ (ಇಬ್ರಿಯ 7:1-28)**

ಆದಿಕಾಲದಲ್ಲೂ ಮತ್ತು ಕೀರ್ತನೆಯಲ್ಲೂ ಮುಂತಿಳಿಸಿದ ಪ್ರವಾದನ ವಾಕ್ಯವು ಇಬ್ರಿಯ 7ರಲ್ಲಿ ನೇರವೇರಿರುತ್ತದೆ ಎಂದು ಬರಹಗಾರನು ತಿಳಿಸಿರುವನು. ಅದು ಯೇಸುವಿನಲ್ಲೇ ಪರಿಪೂರ್ಣವಾಗಿದೆ. ಮೆಲ್ಕಿಜೆದೇಕನ ತರಹದ ಸದಾಕಾಲವಿರುವ ಯಾಜಕನು ಯೇಸುವೇ ಆಗಿರುವನು.

## ಆರು ವಿಧವಾದ ಹೋಲಿಕೆಗಳು

ಯೇಸು ಮಹಾಯಾಜಕನಾಗಿರುವನು ಎಂಬುದನ್ನು ದೃಢಪಡಿಸುವ ಮೊದಲು, ಆತನು ನ್ಯಾಯಯುತವಾದ ಯಾಜಕನು ಎಂದು ತಿಳಿಯಬೇಕು. ಯೇಸು, ಆರೋನನ ವಂಶದವನಾಗದೆ, ಮೆಲ್ಕಿಜೆದೇಕನ ತರಹದ ಯಜಕನಾಗಿರುವನು? ಅದರ ಕುರಿತು ಇಬ್ರಿಯ 7ರಲ್ಲಿ ವಿವಿಧ ವರ್ಗವನ್ನು ಕಾಣುತ್ತೇವೆ.[3]

**ಅದರ ಘನವಾದ ಸ್ವಭಾವ**

ಲೇವಿಯ ಯಾಜಕತ್ವದಲ್ಲಿ, ಯಾಜಕ ಹಾಗೂ ಅರಸನ ಸ್ಥಾನಮಾನಗಳು ವಿವಿಧವಾಗಿದ್ದವು. ಆದರೆ ಮೆಲ್ಕಿಜೆದೇಕನ ವಿಚಾರದಲ್ಲಿ ಯಾಜಕತ್ವ ಹಾಗೂ ಅರಸುತನದ ಸ್ಥಾನ ಒಂದೇ ಆಗಿದ್ದವು (ಇಬ್ರಯ 7:1). ಹಾಗೆಯೇ ಯೇಸು ಸಹ ಅರಸನೂ ಹಾಗೂ ಯಾಜಕನೂ ಆಗಿರುವನು. ಪ್ರಕಟನೆಯಲ್ಲಿ ಆತನನ್ನು "ರಾಜಾಧಿರಾಜನು ಅರಸರ ಅರಸನು" ಎನ್ನಲಾಗಿದೆ (ಪ್ರಕಟನೆ 17:14; 19:16; ಹೋಲಿಸಿ 1 ತಿಮೊಥೆ 6:15).

**ಅದರಲ್ಲಿರುವ ನೈತಿಕವಾದ ಸ್ವಭಾವ**

ಆತನಲ್ಲಿ ನೀತಿ ಹಾಗೂ ಸಮಾಧಾನ ಇದ್ದದರಿಂದ ಆತನನ್ನು ಮೆಲ್ಕಿಜೆದೇಕ ಎಂದು ಹೆಸರಿಸಲಾಗಿದೆ (ಇಬ್ರಿಯ 7:2). "ಯಾಕೆಂದರೆ ಅಬ್ರಹಾಮನು ತಾನು ಜಯಿಸಿಕೊಂಡು ತಂದಿದ್ದ ಎಲ್ಲಾ ವಸ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು ಮೆಲ್ಕಿಜೆದೇಕನಿಗೆ ಕೊಟ್ಟನು" ಎಂಬುದರಲ್ಲಿ ಊರ್ಜಿತಗೊಂಡಿದೆ (ವಚನ 4; ನೋಡಿರಿ ಆದಿಕಾಂಡ 14:17-20).

ನೈತಿಕ ಸ್ವಭಾವಕ್ಕೂ ಹಾಗೂ ಲೇವಿಯ ಯಾಜಕತ್ವಕ್ಕೂ ಯಾವುದೇ ಸಂಬಂಧವಿರಲಿಲ್ಲ. ಒಬ್ಬ ಮನುಷ್ಯನು ತಾನು ಲೇವಿಯ ವಂಶದವನಾಗಿದ್ದರೆ (ನ್ಯೂನತೆ ಹೊರತು ಪಡಿಸಿ) ಅವನು ಯಾಜಕನೇ. ಲೇವಿಯ ವಂಶದವನಲ್ಲದವನು ಯಾಜಕನಾಗಲು ಅನರ್ಹನಾಗಿದ್ದನು, ಅವನ ಭಕ್ತಿಯು ಲೆಕ್ಕಕ್ಕಿರುವದಿಲ್ಲ. ಯೇಸು ಉತ್ತಮ ಸ್ವಭಾವದವನಾಗಿದ್ದರಿಂದ, ಮೆಲ್ಕಿಜೆದೇಕನ ತರಹದ ಯಾಜಕನು ಎಂಬ ತರ್ಕವಿದೆ (ವಚನಗಳು 16, 26).

**ಅದರಲ್ಲಿರುವ ಕುಲರಹಿತ ಸ್ವಭಾವ**

ಸತ್ಯವೇದದಲ್ಲಿರುವ ಮೆಲ್ಕಿಜೆದೇಕನ ಹಿನ್ನೆಲೆಯನ್ನು ಎಲ್ಲಿಯೂ ದಾಖಲಿಸಿರುವದಿಲ್ಲ: ಅವನು ಎಲ್ಲಿಂದ ಬಂದವನು, ಎಲ್ಲಿಯವನು ಎಂದು ತಿಳಿಸಿರುವದಿಲ್ಲ. ಮೋಶೆಯು

ಯಾಜಕತ್ವದ ಕುರಿತ ದೇವರ ನಿಯಮಾವಳಿಯನ್ನು ಬರೆದಿದ್ದರೂ, ಮೆಲ್ಕಿಜೆದೇಕನ ಯಾವುದೇ ಚರಿತ್ರೆಯನ್ನು ತಿಳಿಸಿರುವದಿಲ್ಲ. ಮೆಲ್ಕಿಜೆದೇಕನ ಯಾಜಕತ್ವವು ಪುರಾತನ ಚರಿತ್ರೆಗೆ ಸೇರಿರುವದಿಲ್ಲ ಎಂದು ಇಬ್ರಿಯ ಪತ್ರಿಕೆಯಲ್ಲಿ ನೋಡುತ್ತೇವೆ (ವಚನ 3), ಆದರೆ ಲೇವಿಯ ಯಾಜಕತ್ವವು ವಂಶಾವಳಿಯನ್ನು ಹೊಂದಿತ್ತು (ವಚನ 14) ಯೇಸು ಯೂದನ ವಂಶದವನಾಗಿದ್ದರೂ, ಯಾಜಕತ್ವಕ್ಕೆ ಅರ್ಹನಾಗಿದ್ದನು.

**ಅದರಲ್ಲಿ ಮುಂದುವರೆದಿರುವ ಸ್ವಭಾವ**

ಮೆಲ್ಕಿಜೆದಕನ ಹಿನ್ನೆಲೆಯ ಕುರಿತು ತರ್ಕಗಳಿದ್ದರೂ, ಮತ್ತು ಅದಕ್ಕೆ ಉತ್ತರ ದೊರಕದೆ ಇದ್ದರೂ, ಆ ಯಾಜಕತ್ವವು ವರ್ತಮಾನದಲ್ಲೂ ಮುಂದುವರೆಯುತ್ತಿದೆ ಎಂದು ತಿಳಿಯಬಹುದು (ವಚನಗಳು 3, 24). ಅದು ಯೇಸುವಿನಲ್ಲಿ ನಿಜವಾಗಿದೆ. ಯೇಸು "ಸದಾಕಾಲದ" ಯಾಜಕನಾಗಿದ್ದಾನೆ (ವಚನಗಳು 16, 17, 25, 28). ಇಲ್ಲಿ ಲೇವಿಯ ವಂಶಾವಳಿಯನ್ನು ಬದಲಾಯಿಸಲಾಗಿದೆ (ವಚನಗಳು 11, 12).

**ಅದರಲ್ಲಿನ ಮಹತ್ವದ ಸ್ವಭಾವ**

ಇದು ತರ್ಕದ ಪ್ರಮುಖ ಅಂಶವಾಗಿದೆ. ಯೆಹೂದ್ಯ ಕ್ರೈಸ್ತರು, ಕ್ರೈಸ್ತರಾದ ಯೆಹೂದ್ಯರಿಗಿಂತ ಕೆಳಮಟ್ಟದಲ್ಲಿದ್ದರು ಎಂಬುದಾಗಿ ತಿಳಿಯಬಾರದು. ಕ್ರೈಸ್ತರು ಯಾಜಕ ಸೇವೆಯನ್ನು ಹೊಂದಿರುವರು ಮತ್ತು ಅದು ಉತ್ತಮ ಗುಣಮಟ್ಟದ್ದಾಗಿರುತ್ತದೆ.[4] ಮೆಲ್ಕಿಜೆದೇಕನ ಸೇವೆಯು, ಲೇವಿಯ ವಂಶದವರಿಗಿಂತಲೂ, ಮಹತ್ವವುಳ್ಳದ್ದಾಗಿತ್ತು ಎಂದು ಎತ್ತಿ ತೋರಿಸಲು ಬರಹಗಾರನು ಕೆಲವು ತರ್ಕಗಳನ್ನು ಈ ಕೆಳಗೆ ನೀಡಿರುವನು:

- ಅಬ್ರಹಾಮನು ಸಹ ಮೆಲ್ಕಿಜೆದೇಕನಿಗೆ ಹತ್ತರಲ್ಲಿ ಒಂದು ಪಾಲುಕೊಟ್ಟನು (ವಚನ 4).
- ಮೆಲ್ಕಿಜೆದೇಕನು ಅಬ್ರಹಾಮನನ್ನು ಆಶೀರ್ವದಿಸಿದನು (ವಚನಗಳು 6, 7).
- ಲೇವಿಯನು ಸಹ (ಅವನ ಪೂರ್ವಿಕನಾದ ಅಬ್ರಹಾಮನು) ದಶಮಾಂಶವನ್ನು ಮೆಲ್ಕಿಜೆದೇಕನಿಗೆ ನೀಡಿದನು.
- ಲೇವಿಯ ಯಾಜಕತ್ವದಿಂದ ಪರಿಪೂರ್ಣತೆ ಉಂಟಾಗದಿದ್ದರೂ (ವಚನಗಳ 11, 19). ಮೆಲ್ಕಿಜೆದೇಕನ ತರಹದ ಯೇಸುವಿನ ಸೇವೆಯಲ್ಲಿ ಪರಿಪೂರ್ಣತೆ ಉಂಟಾಯಿತು (ವಚನಗಳು 19, 25).
- ಯಾವುದೇ ಆಣೆಯಿಲ್ಲದೆ ಲೇವಿಯರು ಯಾಜಕರಾಗಿದ್ದರೂ, ಕೀರ್ತನೆ 110:4ರಲ್ಲಿ, ಮೆಲ್ಕಿಜೆದೇಕನು ಆಣೆಯಿಂದ ಯಾಜಕನಾದನು ಎಂದು ತಿಳಿಸುತ್ತದೆ (ಇಬ್ರಿಯ 7:20, 21).
- ಲೇವಿಯ ಯಾಜಕರು ನಿರಂತರವಾಗಿ ಯಜ್ಞಗಳನ್ನು ಸಮರ್ಪಿಸುತ್ತಿದ್ದರು ಕ್ರಿಸ್ತನಾದರೋ ಒಂದೇ ಸಾರಿ ತನ್ನನ್ನು ತಾನು ಯಜ್ಞವನ್ನಾಗಿ ಸಮರ್ಪಿಸಿದನು (ವಚನ 27).

**ಅದರಲ್ಲಿರುವ ಏಕ ವಚನದ ಸ್ವಭಾವ**

ಪ್ರೇರಿತವಾದ ವಾಕ್ಯದ ಪ್ರಕಾರ, ಮೇಲ್ಕಿಜೆದೇಕನ ತರಹದ ಯಾಜಕನು ಒಬ್ಬನೇ ಎಂದು ಹಳೆ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ. ಆದರೆ ಲೇವಿಯ ವಂಶದ ಯಾಜಕರು ಅನೇಕರಿದ್ದರು (ವಚನ 23). ಈ ದಿನಗಳಲ್ಲಿ ಒಬ್ಬನೇ ಒಬ್ಬ ಮಹಾಯಾಜಕನ ಅಗತ್ಯವಿದೆ ಕಾರಣವೇನೆಂದರೆ, ಯೇಸು "ಒಂದೇ ಸಾರಿ" ಯಜ್ಞಾರ್ಪಿತನಾದನು (ನೋಡಿರಿ 10:10)

ಮತ್ತು ಆತನು ಜೀವಿಸುತ್ತಿದ್ದಾನೆ, ನಮಗಾಗಿ ಬೇಡುವವನಾಗಿದ್ದಾನೆ (7:24, 25, 27) (ನೋಡಿರಿ 2:17, 18; 4:14-16).

## ಒಂದು ಅಂಶ

ಒಂದು ವಾಕ್ಯಭಾಗವನ್ನು ಓದುವಾಗ, ಬರಹಗಾರನ ಉದ್ದೇಶವನ್ನು ಅರಿಯುವದು ಕಷ್ಟಕರವೇ. ಇಬ್ರಿಯ 7ರಲ್ಲಿ ಅಂತಹ ಸಮಸ್ಯೆಯಿರುವದಿಲ್ಲ. ಯಾಕೆಂದರೆ ಬರಗಾರನು ತನ್ನ ಉದ್ದೇಶವನ್ನು ಸ್ಪಷ್ಟಮಾಡಿರುವನು. ಮುಂದಿನ ಅಧ್ಯಾಯವು ಈ ಮಾತುಗಳಿಂದ ಆರಂಭಗೊಳ್ಳುತ್ತದೆ:

> ನಾವು ಈಗ ಹೇಳುವ ಸಂಗತಿಗಳಲ್ಲಿ ಮುಖ್ಯವಾದ ಮಾತೇನಂದರೆ - ಪರಲೋಕದೊಳಗೆ ಮಹತ್ವವುಳ್ಳ ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾದಂಥ ಮಹಾಯಾಜಕನು ನಮಗಿದ್ದಾನೆ. ಈತನು ಪವಿತ್ರಸ್ಥಾನದಲ್ಲಿ ಅಂದರೆ ಮನುಷ್ಯನು ಹಾಕದೆ ಕರ್ತನೇ ಹಾಕಿದ ನಿಜವಾದ ದೇವದರ್ಶನಗುಡಾರದಲ್ಲಿ ಯಾಜಕೋದ್ಯೋಗ ನಡಿಸುವವನಾಗಿದ್ದಾನೆ (8:1, 2).

"ಮೆಲ್ಕಿಜೆದೇಕನ ತರಹದ" ಆಶ್ಚರ್ಯಕರವಾದ ಈ ಯಾಜಕನು, ಮಹತ್ವದ ವ್ಯಕ್ತಿಯಾಗಿರುವನು, ಆತನೇ ನಮ್ಮ ಮಹಾಯಾಜಕನು. ಯಜ್ಞದ ಮೂಲಕ ನಮ್ಮನ್ನು ಪರಾಂಬರಿಸಿರುವನು ಆತನು ಪವಿತ್ರಸ್ಥಾನದಲ್ಲಿ ನಮಗೋಸ್ಕರ ಯಾಜಕೊದ್ಯೋಗವನ್ನು ಮಾಡುತ್ತಾನೆ (7:27; 9:14, 24-28). ಆತನು ನಮಗೋಸ್ಕರ ಪ್ರಾರ್ಥನೆ ಮಾಡುತ್ತಿದ್ದಾನೆ (4:14-16). ಲ್ಯಾಟಿನ್ ಭಾಷೆಯಲ್ಲಿನ "ಯಾಜಕ" ಎಂದರೆ (ಪೊಂಟಿಫಿಕ್ಸ್) "ಸೇತುವೆ ಕಟ್ಟುವವನು."[5] ಆತನ ಮರಣ ಹಾಗೂ ನಿರಂತರ ಸೇವೆಯ ನಿಮಿತ್ತ ಯೇಸು ನಮಗಾಗಿ ಒಂದು ಸೇತುವೆಯನ್ನು ದೇವರ ಮತ್ತು ನಮ್ಮ ನಡುವೆ ಕಟ್ಟಿದ್ದಾನೆ. ಆತನೇ ನಮ್ಮ "ಪ್ರಧಾನ ಮಂತ್ರಿ" ಎಂದು ಒಬ್ಬ ಬರಹಗಾರನು ಹೇಳಿರುವನು.[6]

---

## ಬೋಧಕರಿಗಾಗಿ ಟಿಪ್ಪಣಿ

"ಅಗೋಚರವಾದ ಮೇಲ್ಕಿಜೆದೇಕನು" ಎಂಬ ತಲೆಬರಹವನ್ನು ನೀಡಬಹುದು. ಅಥವಾ "ಗಟ್ಟಿಯಾದ ಆಹಾರಕ್ಕಾಗಿ ನೀನು ಸಿದ್ಧನೋ?" ಎಂಬುದನ್ನು ಬಳಸಬಹುದು.

Winifred Clark ಹಾಗೂ G. C. Brewer, ಯಾಜಕರ ಬಗ್ಗೆ "According to the Order of Melchizedek" at a lectureship in Denton, Texas, in 1983.[7] ಎಂಬ ಪಾಠವನ್ನು ಮಾಡಿರುವರು.

---

ಟಿಪ್ಪಣಿಗಳು

[1]The three subheadings in this section are from Winifred Clark, "After the Order of Melchizedek," *Second Annual Denton Lectures* (1983): 123-30. [2]ಇದು ಯೇಸುವಿನ ಕುರಿತಾದ ಮಹತ್ವದ ಕೀರ್ತನೆ. [3]ಮುಂದಿನ ಚಾರ್ಟನ್ನು ನೋಡಿರಿ. [4]"ಕ್ರೈಸ್ತತ್ವವು ಉತ್ತಮವಾದದ್ದೆ" ಎಂಬ ಪಾಠ ನೋಡಿರಿ [5]William Barclay, *The Letter to the Hebrews,* 3rd ed., rev. and updated, The New Daily Study Bible (Louisville: Westminster John Knox Press, 2002), 37. [6]Robert Milligan, *Epistle to the Hebrews* (Nashville: Gospel Advocate Co., 1954), 218. [7]Clark. [8]G. C. Brewer, *Brewer's Sermons: Christ Crucified* (Nashville: B. C. Goodpasture, 1952), 119-36.

| ಮೆಲ್ಕಿಜೆದೇಕನ ಯಾಜಕತ್ವ: ನೆರಳು | ಯೇಸುವಿನ ಯಾಜಕತ್ವ: ನೆರವೇರುವಿಕೆ |
|---|---|
| ಅರಸು ಹಾಗೂ ಯಾಜಕ (7:1) | ಯಾಜಕ ಹಾಗೂ ಅರಸ (1 ತಿಮೊಥೆ 6:15) |
| ನೀತಿ ಹಾಗೂ ಸಮಾಧಾನದ ಸ್ವಭಾವ (7:2) | ಸದ್ಗುಣದ ಜೀವಿತ (7:16, 27) |
| ಲೇವಿಯ ವಂಶದವನಲ್ಲ (7:3ಬಿ) | ಲೇವಿಯ ವಂಶದವನಲ್ಲ (7:14) |
| ಯಾಜಕ ವೃತ್ತಿಯ ದಾಖಲೆಗಳಲ್ಲಿ (7:3ಬಿ) | ಸದಾಕಾಲದ ಯಾಜಕತ್ವ (7:16, 17, 25, 28) |
| ಲೇವಿಯ ಯಾಜಕತ್ವಕ್ಕಿಂತಲೂ ಮಹತ್ವವುಳ್ಳದ್ದು (7:7) | ಮಹತ್ವದ ಯಾಜಕತ್ವ (9:11) |
| ಕ್ರಿಸ್ತನಿಗೆ ಹೋಲಿಸಿದರೆ, ಒಬ್ಬನೆ ಯಾಜಕ (7:1-8:2) | ಈ ದಿನಕ್ಕೆ ಅಗತ್ಯವಿರುವ ಒಬ್ಬನೇ ಮಹಾಯಾಜಕ (10:10) |